1-30 P.M.

ಶ್ರೀ ಟಿ. ದಾಡಪ್ಪಗೌಡ.—ಸರ್ಕಾರದ ಪಾಠಶಾಲೆಗಳನ್ನು ತೆರೆಯುವದು ಸರ್ಕಾರದ ಕರ್ತವ್ಯವಲ್ಲ ಎಂದು ಮಂತ್ರಿಗಳು ಈಗತಾನೆ ಅಪ್ಪಣೆ ಕೊಡಿಸಿದರು. ಹಾಗಾದರೆ ಕಳೆದ ಮೂರು ವರ್ಷಗಳಲ್ಲಿ ಸರಕಾರವತಿಯಿಂದ ಎಷ್ಟು ಯಾವ ಸ್ಕೂಲುಗಳನ್ನು ತೆರೆದಿಲ್ಲವೇ ?

ಶ್ರೀ ಎಸ್. ಆರ್. ಕಂತಿ.—ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರವನ್ನು ಒದಗಿಸುವಾಗುವದು.

ಶ್ರೀ ಎಂ. ಸಿ. ಬಸಪ್ಪ.—ಮುಂದಿನ ಸಾಲಿನಲ್ಲಿ ಎಲ್ಲೆಲ್ಲಿ ಈ ಶಾಲೆಗಳನ್ನು ಮಾಡಲು ಹಣವನು ಎಷ್ಟೆಷ್ಟು.....

Mr SPEAKER.—The Hon'ble Member wants to discuss the Budget !

Sri M. C. BASAPPA.—I want to know the programme for the year on this particular sub-head.

Sri S. R. KANTHI.—The programme is not as yet ready. It will be placed in the hands of the members soon after it is ready.

ಶ್ರೀ ಎಂ. ಎನ್. ಕೃಷ್ಣ ಸಿಂಗ್.—ಅಂಥ ಅವಕಾಶಗಳಿದ್ದರೆ ಮುಂದಿನ ಸಾಲಿನಲ್ಲಿ ಇಲ್ಲಿಗೆ ಒಂದು ಹೈ ಸ್ಕೂಲನ್ನು ಒದಗಿಸುತ್ತೀರಾ ?

ಶ್ರೀ ಎಸ್. ಆರ್. ಕಂತಿ.—ಅಂಥ ಪ್ರಸಂಗ ಬಂದರೆ ನೋಡೋಣ.

Non-availability of Text Books.

*Q.—266. Sri R. KENCHAPPA (Pavagada).—

Will the Government be pleased to state :—

(*a*) the names of books which were prescribed for different classes of middle and high schools of Tumkur District which were not supplied so far ;

(*b*) the reason for the same ;

(*c*) whether they are aware of the inconveniences caused to the students on account of the non-availability of the text books ?

A.—Sri S. R. KANTHI (Minister for Education).—

(*a*) names of the books not available upto August 1965.

			Standard
1	English Non-detailed Text	..	X
2	Comp. English ...	...	V
3	Comp. English ...	...	VI
4	Comp. English ...	...	VII
5	General Science (Kannada Medium)	..	III
6	do	...	IV
7	do	...	V
8	do	...	VI
9	do	...	VII
10	Social Studies (Kannada Medium)	...	V
11	do	...	VII
12	General Mathematics	...	V
13	Optional Chemistry (Kannada Medium)	...	IX
14	do (English Medium)	...	IX

(SRI S. R. KANTHI)

(b) Unavoidable delay in printing by private printers.
(c) Yes; all the books have since been supplied.

ಶ್ರೀ ಆರ್. ಕೊಚಪ್ಪ.—(ಸಿ)ಗೆ ಉತ್ತರವಾಗಿ—ಹೌದು ಎಂದು ಹೇಳಿದ್ದಾರೆ. ಹಾಗಾದರೆ ಸರ್ಕಾರದವರ ಗಮನಕ್ಕೆ ಒಂದ ೨ ಅನಾನುಕೂಲಗಳೇನೆಂಬುದನ್ನು ತಿಳಿಸುತ್ತಾರೆಯೇ ?

† ಶ್ರೀ ಎಸ್. ಆರ್. ಕಂಠಿ.—ಅವು ನಮ್ಮ ಗಮನಕ್ಕೆ ಬಂದಿಲ್ಲ.

Sri K. LAKKAPPA.—May I know the number of books required in the District ?

ಶ್ರೀ ಎಸ್. ಆರ್. ಕಂಠಿ.—ನಾವು ಬೇಕಾದಷ್ಟು ಪುಸ್ತಕಗಳನ್ನು ಪ್ರಿಂಟ್ ಮಾಡಿಸುತ್ತಿದ್ದೇವೆ, ಅದನ್ನು ಹೇಗೆ ಹೇಳುವುದಕ್ಕಾಗುತ್ತದೆ ?

ಶ್ರೀ ಆರ್. ಕೊಚಪ್ಪ.—ಈ ಖಾನಗೀ ಮುದ್ರಣಾಲಯಗಳಿಗೆ ಈ ಕಾರ್ಯವನ್ನು ವಹಿಸಿರುವುದರಿಂದ ಕ್ರಮಬದ್ಧವಾಗಿ ನಿರ್ವಹಣೆಯಾಗುವುದಕ್ಕೆ ಕಾರಣವಾಗಿಲ್ಲವೇ ? ಅದಕ್ಕಾಗಿ ಸರ್ಕಾರದವರೇ ಏಕೆ ಒಂದು ಪ್ರತ್ಯೇಕ ಮುದ್ರಣಾಲಯವನ್ನು ತೆರೆಯಬಾರದು ?

ಶ್ರೀ ಎಸ್. ಆರ್. ಕಂಠಿ.—ನಮ್ಮಲ್ಲಿಯೂ ಒಂದು ಮುದ್ರಣಾಲಯವಿದೆ. ಆದರೆ ಅದರಲ್ಲಿ ವರ್ಷಕ್ಕೆ ೨ಲಾ ಎಂಟು ಲಕ್ಷದಿಂದ 15-16 ಲಕ್ಷದವರೆಗೂ ಪುಸ್ತಕಗಳನ್ನು ಪ್ರಿಂಟ್ ಮಾಡಿಸಲಾಗುತ್ತಿದೆ, ಅವಕ್ಕಿಂತ ಹೆಚ್ಚಿಗೆ ಅಲ್ಲಿ ಪ್ರಿಂಟ್ ಮಾಡಿಸಲು ಸಾಧ್ಯವಿಲ್ಲ. ನಮಗೆ ವರ್ಷಕ್ಕೆ 70-80 ಲಕ್ಷ ಪಠ್ಯ ಪುಸ್ತಕಗಳು ಬೇಕಾಗುವುದರಿಂದ ನಾವು ಖಾನಗೀ ಮುದ್ರಣಾಲಯಗಳಿಗೂ ಆರ್ಡರನ್ನು ಕೊಡಬೇಕಾಗುತ್ತದೆ. ಸರ್ಕಾರದವರು ನ್ಯಾಷನಲೈಜ್ ಮಾಡಿರುವಷ್ಟು ಪುಸ್ತಕಗಳನ್ನೇ ಪ್ರಿಂಟ್ ಮಾಡಿಸಲು ಸಾಧ್ಯವಾಗಿಲ್ಲ.

Sri K. LAKKAPPA.—Is it not the primary duty of the Education Department to see that the books are supplied to the student within time ? If not, is it not a fact that it is the defeat of the education policy of the Government ?

Sri S. R. KANTHI.—I agree that it is the policy of the Government to see that the books are made available to the students as early as possible.

Sri K. LAKKAPPA.—There is no answer to the latter portion of my question. Evidently the latter portion of my question is the defeat of the education policy.

Mr. SPEAKER.—The Hon'ble Member is running into warmth. That means he knows the answer.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈ ಪಠ್ಯ ಪುಸ್ತಕಗಳನ್ನು ಓದಿಗನತಕ್ಕ ಕಾರ್ಯದಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ನಿಧಾನವಾಯಿತು ಎಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ತುಮಕೂರು ಜಿಲ್ಲೆಯಲ್ಲೇ ಕೆಲವು ಭಾಗಕ್ಕೆ ಬೇಗ ಸಿಕ್ಕಿದೆ ಇನ್ನು ಕೆಲವು ಕಡೆಗಳಲ್ಲಿ ಸ್ವಲ್ಪ ನಿಧಾನವಾಗಿದೆ ಆ ವಿಷಯ ಸರ್ಕಾರದವರ ಗಮನಕ್ಕೆ ಬಂದ ಕೂಡಲೆ ಎಲ್ಲ ಕಡೆಗಳಿಗೂ ಬೇಗ ಸಿಕ್ಕುವಂತೆ ವ್ಯವಸ್ಥೆ ಮಾಡಲಾಯಿತು.

ಶ್ರೀ ಕೆ. ಎಸ್. ನಾರಾಯಣ ರಾವ್.—ನಮ್ಮಲ್ಲಿ ಒಂದು ವೆಸ್ಟ್ ಜರ್ಮನ್ ಪ್ರಿಂಟಿಂಗ್ ಪ್ರೆಸ್‌ನ್ನು ಪಠ್ಯ ಪುಸ್ತಕಗಳನ್ನು ವಿತರಿಸಲು ಸ್ಥಾಪಿಸುವುದಾಗಿ ಇಲ್ಲಿಗೆ ಬಂದು ಅರ್ಜಿ ಆಗಿದೆ ಎಂದು ಎಲ್ಲಯೋ ನೋಡಿದ ಜ್ಞಾಪಕವಿದೆ, ಅದರ ವಿಚಾರವೇನು ?

ಶ್ರೀ ಎಸ್. ಆರ್. ಕಂಠಿ.—ಒಂದನ್ನು ಮೈಸೂರಿಗೆ ಅರ್ಜಿ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರದವರಿಗೂ ಜರ್ಮನ್ ಸರ್ಕಾರದೊಂದಿಗೆ ಅಗ್ರಿಮೆಂಟನ್ನು ಪೂರ್ಣವಾಗಿ ಮಾಡಿಕೊಂಡಿಲ್ಲ. ಅವನ್ನು ಕೇವಲ ಪಠ್ಯ ಪುಸ್ತಕಗಳಿಗೆ ಮಾತ್ರ ಅಂತ ಅಲ್ಲ, ಅದು ಒಂದು ಜನರಲ್ ಪ್ರಿಂಟಿಂಗ್ ಪ್ರೆಸ್ ಮಾತ್ರ.

ಶ್ರೀ ಕೆ. ಎಸ್. ನಾರಾಯಣರಾವ್.—ಮೈಸೂರಿನಲ್ಲಿ ಒಂದು ಪ್ರಿಂಟಿಂಗ್ ಪ್ರೆಸ್‌ನ್ನು ಹಾಕಲಾಗುತ್ತಿದೆಯೆಂದು ಬೋರ್ಡ್ ಹಾಕಿದ್ದು ನಿಜವೇ ?

ಶ್ರೀ ಎಸ್. ಆರ್. ಕಂಠಿ.—ಹೇಗಾದರೂ ನಮ್ಮ ಮೈಸೂರಿಗೊಂದು ಪ್ರೆಸ್ ಇದ್ದೇ ಇರುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಸರ್ಕಾರದವರೇ ಒಂದು ಪ್ರತ್ಯೇಕ ಪ್ರಿಂಟಿಂಗ್ ಪ್ರೆಸ್ಸನ್ನು ಇಟ್ಟು ಪಠ್ಯ ಪುಸ್ತಕಗಳನ್ನು ಒದಗಿಸುವುದಕ್ಕಾಗುವದಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಅವಶ್ಯ ಪ್ರಯತ್ನ ಮಾಡಲಾಗುತ್ತಿದೆ.

Sri K. LAKKAPPA.—When the work of printing the text books was entrusted to the private enterprise, why Government has not taken any action for the delay against them ?

ಶ್ರೀ ಎಸ್. ಆರ್. ಕಂಠಿ.—ಅಕ್ಷನ್ ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಎನ್. ಮಾವಪ್ಪ ಗೌಡ.—ಆ ಪ್ರಿಂಟಿಂಗ್ ಪ್ರೆಸ್ ಈಗ ಹುಬ್ಬಳ್ಳಿಗೋ ಏನೋ ಹೋಗುತ್ತಿದೆ ಎನ್ನುತ್ತಿದ್ದಾರೆ ಆದರ ಸಮಾಚಾರವೇನು ?

ಶ್ರೀ ಎಸ್. ಆರ್. ಕಂಠಿ.—ಅದು ಎಲ್ಲಿ ಇರಬೇಕೋ ಅಲ್ಲಿಯೇ ಇರುತ್ತದೆ.

ಒಟ್ಟು ಮಾತ್ಯ ಸದಸ್ಯರು.—ಪ್ರತಿಯೊಂದು ಜಿಲ್ಲೆಗೂ ಪ್ರತ್ಯೇಕ ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಿಸುವುದರ ಬದಲು ಇಡೀ ರಾಜ್ಯಕ್ಕೆಲ್ಲಾ ಒಂದೇ ಪಠ್ಯ ಪುಸ್ತಕ ಇರುವಂತೆ ಮಾಡುವುದಕ್ಕೇ ಕಾಗುವುದಿಲ್ಲ ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Sri S. R. KANTHI.—The point at issue is that no publisher in our state is able to supply books for the entire State and that is why we have to divide the entire State into 14 zones. It is not district-wise ; it is zonal-wise. It is not possible for a single publisher to supply books to the entire State.

ಶ್ರೀ ಕೆ. ಲಕ್ಕಪ್ಪ.—ಬೇರೆ ಬೇರೆ ಜಿಲ್ಲೆಗಳಿಗೆ ಬೇರೆ ಬೇರೆ ಪಠ್ಯ ಪುಸ್ತಕಗಳಿರುವುದರಿಂದ ಅಧಿಕಾರಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಎರಡು-ಮೂರು ತಿಂಗಳಿಗೊಮ್ಮೆ ವರ್ಗ ಮಾಡುವುದರಿಂದ ಅವರಿಗೆಷ್ಟು ಅನಾನುಕೂಲವಾಗುತ್ತದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Mr. SPEAKER.—The question relates to supply of text books in Tumkur District to the school children, and the supplementary is, " why do you transfer so frequently officers in Tumkur District ".

Sri K. LAKKAPPA.—The answer given by the Hon'ble Minister refers to the entire State ; the entire District has been divided and the text books have also been prescribed in a different manner. Therefore, that question arose.

Mr. SPEAKER.—Who divided and which District ? Transfers do not come under supplementaries. It is a good point for a fresh question.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಕಾಲಕ್ಕೆ ಪಠ್ಯ ಪುಸ್ತಕಗಳನ್ನು ಒದಗಿಸದಿದ್ದ ಖಾಸಗೀ ಪ್ರೆಸ್ಸಿನವರ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುವುದೆಂದು ಹೇಳೋಣಾಯಿತು. ಹಾಗೆ ಇಲ್ಲಿಯ ವರಗೂ ಎಷ್ಟು ಜನರ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿದೆ ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರವನ್ನು ಒದಗಿಸಲಾಗುವುದು.

Roads taken over by the P.W.D.

*Q.—162. Sri S. KARIAPPA (Kanakapura).—

Will the Government be pleased to state :—

(*a*) the names of new roads in the Bangalore District that have been taken over by the P.W.D. during the last three years (Taluk-wise details may be furnished) ;

(*b*) the length of each of those roads ?